Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, शुक्रवार, एप्रील ६, २०१२ | वैशाक १७, १९३४ (शका) | खंड. ४८ |
| No. 1 | New Delhi, Friday, April 6, 2012 | Vaishakha 17, 1934 (Saka) | Vol. 48 |
| ಸಂ. ೧ | ನವ ದೆಹಲಿ, ಶುಕ್ರವಾರ, ಏಪ್ರಿಲ್ ೬, ೨೦೧೨ | ವೈಶಾಖ ೧೭, ೧೯೩೪ (ಶಕ) | ಸಂಪುಟ. ೪೮ |

**Ministry of Law and Justice**
(Legislative Department)
New Delhi, 6th April, 2012

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 6ನೇ ಏಪ್ರಿಲ್, 2012**

The Translation in Kannada of the following Acts, namely :- (1) The Energy Conservation Act, 2001 (2) The Haj Committee Act, 2002 (3) The Multi-State Co-operative Societies Act, 2002 (4) The Central Educational Institutions (Reservation in Admission) Act, 2006 (5) The Government Securities Act, 2006 (6) The Science and Engineering Research Board Act, 2008 (7) The Unorganised Workers Social Security Act, 2008 (8) The National Investigation Agency Act, 2008 and (9) The Right of Children to Free and Compulsory Education Act, 2009 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ ಎಂದರೆ:- (1) ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001 (2) ಹಜ್ ಸಮಿತಿ ಅಧಿನಿಯಮ, 2002 (3) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 (4) ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 (5) ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (6) ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ ಅಧಿನಿಯಮ, 2008 (7) ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 (8) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಮತ್ತು (9) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 - ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008

(2008ರ ಅಧಿನಿಯಮ ಸಂಖ್ಯೆ 33)

The Unorganised Worker Social Security Act, 2008

[30ನೇ ಡಿಸೆಂಬರ್, 2008]

ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತೆಗಾಗಿ ಮತ್ತು ಕಲ್ಯಾಣಕ್ಕಾಗಿ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ – I

## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ನಿಯೋಜಕ" ಎಂದರೆ, ಪರಿಶ್ರಮ ಧನ ಸಂದಾಯದ ಮೇಲೆ ನೇರವಾಗಿ ಅಥವಾ ಅನ್ಯಥಾ ಒಬ್ಬ ಅಸಂಘಟಿತ ಕೆಲಸಗಾರನನ್ನು ತೊಡಗಿಸಿಕೊಂಡಿರುವ ಅಥವಾ ನಿಯೋಜಿಸಿಕೊಂಡಿರುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಒಂದು ಸಂಘ;

(ಬಿ) "ಗೃಹ ಆಧಾರಿತ ಕೆಲಸಗಾರ" ಎಂದರೆ, ತನ್ನ ಮನೆಯಲ್ಲಿ ಅಥವಾ ನಿಯೋಜಕನ ಕೆಲಸದ ಸ್ಥಳವನ್ನು ಹೊರತುಪಡಿಸಿ ತನ್ನ ಆಯ್ಕೆಯ ಇತರ ಆವರಣಗಳಲ್ಲಿ, ನಿಯೋಜಕನು ಸಾಧನ ಸಲಕರಣೆಗಳನ್ನು, ಸಾಮಗ್ರಿಗಳನ್ನು ಅಥವಾ ಇತರ ಪರಿಕರಗಳನ್ನು ಒದಗಿಸಿರಲಿ ಅಥವಾ ಒದಗಿಸಿಲ್ಲದಿರಲಿ, ಪರಿಶ್ರಮ ಧನದ ಸಂದಾಯದ ಮೇಲೆ ನಿಯೋಜಕನಿಗಾಗಿ ಸರಕುಗಳ ಉತ್ಪಾದನೆಯಲ್ಲಿ ಅಥವಾ ಸೇವೆಗಳಲ್ಲಿ ತೊಡಗಿರುವ ವ್ಯಕ್ತಿ;

(ಸಿ) "ಗುರುತಿನ ಚೀಟಿ" ಎಂದರೆ, 10ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಜಿಲ್ಲಾ ಆಡಳಿತವು ಅಸಂಘಟಿತ ಕೆಲಸಗಾರನಿಗೆ ನೀಡಿದ ಒಂದು ಚೀಟಿ, ದಸ್ತಾವೇಜು ಅಥವಾ ಪ್ರಮಾಣ ಪತ್ರ;

(ಡಿ) "ರಾಷ್ಟ್ರೀಯ ಮಂಡಲಿ" ಎಂದರೆ, ಅಸಂಘಟಿತ ಕೆಲಸಗಾರರಿಗಾಗಿ 5ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಚಿತವಾದ ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ;

(ಇ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಒಂದು ಅಧಿಸೂಚನೆ;

(ಎಫ್) "ಸಂಘಟಿತ ವಲಯ" ಎಂದರೆ, ಅಸಂಘಟಿತ ವಲಯವಲ್ಲದ ಒಂದು ಉದ್ದಿಮೆ;

(ಜಿ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ನೋಂದಾಯಿತ ಕೆಲಸಗಾರ" ಎಂದರೆ, 10ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ನೋಂದಾಯಿತನಾದ ಅಸಂಘಟಿತ ಕೆಲಸಗಾರ;

(ಐ) "ಅನುಸೂಚಿ" ಎಂದರೆ, ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಜೆ) "ರಾಜ್ಯ ಮಂಡಳಿ" ಎಂದರೆ, ಅಸಂಘಟಿತ ಕೆಲಸಗಾರರಿಗಾಗಿ 6ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಚಿಸಲಾದ ........... (ರಾಜ್ಯದ ಹೆಸರು) ರಾಜ್ಯ ಸಾಮಾಜಿಕ ಭದ್ರತಾ ಮಂಡಳಿ;

(ಕೆ) "ಸ್ವಯಂ – ನಿಯೋಜಿತ ಕೆಲಸಗಾರ" ಎಂದರೆ, ಒಬ್ಬ ನಿಯೋಜಕನಿಂದ ನಿಯೋಜಿತನಾಗಿರದ, ಆದರೆ, ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಒಂದು ಮೊತ್ತದ ಮಾಸಿಕ ಗಳಿಕೆಗೆ ಒಳಪಟ್ಟು ಅಸಂಘಟಿತ ವಲಯದಲ್ಲಿ ಯಾವುದೇ ಉದ್ಯೋಗದಲ್ಲಿ ಸ್ವತಃ ತನ್ನನ್ನು ತೊಡಗಿಸಿಕೊಂಡಿರುವ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಅಂಥ ಗರಿಷ್ಠ ಪರಿಮಿತಿಗೊಳಪಟ್ಟು ಸಾಗುವಳಿ ಭೂಮಿಯನ್ನು ಹೊಂದಿರುವ ಯಾರೇ ವ್ಯಕ್ತಿ;

(ಎಲ್) "ಅಸಂಘಟಿತ ವಲಯ" ಎಂದರೆ, ವ್ಯಕ್ತಿಗಳ ಅಥವಾ ಸ್ವಯಂ ನಿಯೋಜಿತ ಕೆಲಸಗಾರರ ಒಡೆತನದಲ್ಲಿರುವ ಹಾಗೂ ಉತ್ಪಾದನೆಯಲ್ಲಿ ಅಥವಾ ಸರಕುಗಳ ಮಾರಾಟದಲ್ಲಿ ನಿರತವಾಗಿರುವ ಅಥವಾ ಇತರ ಯಾವುದೇ ಬಗೆಯ ಸೇವೆಯನ್ನು ಒದಗಿಸುತ್ತಿರುವ, ಮತ್ತು ಉದ್ಯಮವು ಕೆಲಸಗಾರರನ್ನು ನಿಯೋಜಿಸಿಕೊಂಡಿದ್ದರೆ, ಅಂಥ ಕೆಲಸಗಾರರ ಸಂಖ್ಯೆಯು 10 ಕ್ಕಿಂತ ಕಡಿಮೆ ಇರುವ ಒಂದು ಉದ್ದಿಮೆ;

(ಎಂ) "ಅಸಂಘಟಿತ ಕೆಲಸಗಾರ" ಎಂದರೆ, ಗೃಹ ಆಧಾರಿತ ಕೆಲಸಗಾರ, ಸ್ವಯಂ ನಿಯೋಜಿತ ಕೆಲಸಗಾರ ಅಥವಾ ಅಸಂಘಟಿತ ವಲಯದ ಒಬ್ಬ ಮಜೂರಿ ಕೆಲಸಗಾರ ಮತ್ತು ಈ ಅಧಿನಿಯಮದ ಅನುಸೂಚಿ – II ರಲ್ಲಿ ನಮೂದಿಸಿದ ಯಾವುವೇ ಅಧಿನಿಯಮಗಳಿಗೆ ಒಳಪಟ್ಟಿರದ ಸಂಘಟಿತ ವಲಯದಲ್ಲಿನ ಕೆಲಸಗಾರನನ್ನು ಒಳಗೊಳ್ಳುತ್ತದೆ; ಮತ್ತು

(ಎನ್) "ಮಜೂರಿ ಕೆಲಸಗಾರ" ಎಂದರೆ, ಒಬ್ಬನೇ ನಿಯೋಜಕನಿಗಾಗಿಯಾಗಲಿ ಅಥವಾ ಒಬ್ಬ ಅಥವಾ ಹೆಚ್ಚು ನಿಯೋಜಕರಿಗಾಗಿಯಾಗಲಿ, ನಗದು ರೂಪದಲ್ಲಾಗಲಿ ಅಥವಾ ವಸ್ತು ರೂಪದಲ್ಲಾಗಲಿ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಮಾಸಿಕ ಮಜೂರಿ ಮೊಬಲಗಿನ ಮೇಲೆ, ಒಬ್ಬ ಗೃಹ ಆಧಾರಿತ ಕೆಲಸಗಾರನಾಗಿಯಾಗಲಿ, ಅಥವಾ ಒಬ್ಬ ತಾತ್ಕಾಲಿಕ ಅಥವಾ ಸಾಂದರ್ಭಿಕ ಕೆಲಸಗಾರನಾಗಿಯಾಗಲಿ, ಅಥವಾ ಒಬ್ಬ ವಲಸೆ ಕೆಲಸಗಾರನಾಗಿಯಾಗಲಿ, ಅಥವಾ ಮನೆ ಕೆಲಸದವರೂ ಒಳಗೊಂಡಂತೆ, ಕುಟುಂಬದವರಿಂದ ನಿಯೋಜಿತರಾದ ಕೆಲಸಗಾರರಾಗಿಯಾಗಲಿ, ಕೆಲಸದ ಸ್ಥಳ ಯಾವುದೇ ಇದ್ದರೂ, ಅಸಂಘಟಿತ ವಲಯದಲ್ಲಿ ಪರಿಶ್ರಮಧನದ ಸಂದಾಯದ ಮೇಲೆ, ಒಬ್ಬ ನಿಯೋಜಕನಿಂದ ನೇರವಾಗಿ ಅಥವಾ ಯಾರೇ ಗುತ್ತಿಗೆದಾರನ ಮೂಲಕ ನಿಯೋಜಿತನಾದ ವ್ಯಕ್ತಿ.

## ಅಧ್ಯಾಯ – II

## ಸಾಮಾಜಿಕ ಭದ್ರತಾ ಪ್ರಯೋಜನಗಳು

3. ಕಾರ್ಯ ಯೋಜನೆಯನ್ನು ರೂಪಿಸುವುದು.– (1) ಕೇಂದ್ರ ಸರ್ಕಾರವು,–

(ಎ) ಜೀವನಕ್ಕೆ ಮತ್ತು ಅಸಮರ್ಥತೆಗೆ ರಕ್ಷಣೆ ಒದಗಿಸುವುದಕ್ಕೆ;

(ಬಿ) ಆರೋಗ್ಯ ಮತ್ತು ಪ್ರಸೂತಿ ಪ್ರಯೋಜನಗಳಿಗೆ;

(ಸಿ) ವೃದ್ಧಾಪ್ಯದ ಸಂರಕ್ಷಣೆಗೆ; ಮತ್ತು

(ಡಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಯಾವುದೇ ಪ್ರಯೋಜನಕ್ಕೆ

– ಸಂಬಂಧಿಸಿದ ವಿಷಯಗಳ ಬಗ್ಗೆ ಅಸಂಘಟಿತ ಕೆಲಸಗಾರರಿಗಾಗಿ ಕಾಲಕಾಲಕ್ಕೆ ಸೂಕ್ತ ಕಲ್ಯಾಣ ಕಾರ್ಯ ಯೋಜನೆಗಳನ್ನು ರೂಪಿಸತಕ್ಕದ್ದು ಮತ್ತು ಅವುಗಳನ್ನು ಅಧಿಸೂಚಿಸತಕ್ಕದ್ದು.

(2) ಈ ಅಧಿನಿಯಮದ 1ನೇ ಅನುಸೂಚಿಯಲ್ಲಿ ಒಳಗೊಂಡ ಕಾರ್ಯಯೋಜನೆಗಳನ್ನು, (1)ನೇ ಉಪ ಪ್ರಕರಣದ ಮೇರೆಗೆ ಕಲ್ಯಾಣ ಕಾರ್ಯಯೋಜನೆಗಳೆಂದು ಭಾವಿಸತಕ್ಕದ್ದು.

(3) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿಗಳನ್ನು ತಿದ್ದುಪಡಿಯನ್ನು ಮಾಡಬಹುದು.

(4) ರಾಜ್ಯ ಸರ್ಕಾರವು,–

(ಎ) ಭವಿಷ್ಯ ನಿಧಿಗೆ;

(ಬಿ) ಉದ್ಯೋಗ ಹಾನಿ ಪ್ರಯೋಜನಕ್ಕೆ;

(ಸಿ) ವಸತಿ ಸೌಕರ್ಯಕ್ಕೆ;

(ಡಿ) ಮಕ್ಕಳಿಗಾಗಿ ಶೈಕ್ಷಣಿಕ ಕಾರ್ಯಯೋಜನೆಗಳಿಗೆ;

(ಇ) ಕೆಲಸಗಾರರ ನೈಪುಣ್ಯತೆಯನ್ನು ಉತ್ತಮಪಡಿಸುವುದಕ್ಕೆ

(ಎಫ್) ಶವಸಂಸ್ಕಾರಕ್ಕೆ ನೆರವು ನೀಡುವುದಕ್ಕೆ; ಮತ್ತು

(ಜಿ) ವೃದ್ಧಾಶ್ರಮಗಳಿಗೆ

– ಸಂಬಂಧಪಟ್ಟ ಯೋಜನೆಗಳೂ ಒಳಗೊಂಡಂತೆ ಅಸಂಘಟಿತ ಕೆಲಸಗಾರರಿಗಾಗಿ ಕಾಲಕಾಲಕ್ಕೆ ಸೂಕ್ತ ಕಲ್ಯಾಣ ಕಾರ್ಯಯೋಜನೆಗಳನ್ನು ರೂಪಿಸಬಹುದು ಮತ್ತು ಅಧಿಸೂಚಿಸಬಹುದು.

4. **ಕೇಂದ್ರ ಸರ್ಕಾರದ ಕಾರ್ಯ ಯೋಜನೆಗಳಿಗೆ ಹಣ ಒದಗಿಸುವುದು.**– (1) ಕೇಂದ್ರ ಸರ್ಕಾರವು ಅಧಿಸೂಚಿಸಿದ ಯಾವುದೇ ಕಾರ್ಯ ಯೋಜನೆಗೆ,–

(i) ಕೇಂದ್ರ ಸರ್ಕಾರವು ಪೂರ್ಣವಾಗಿ ಹಣ ಒದಗಿಸಬಹುದು; ಅಥವಾ

(ii) ಕೇಂದ್ರ ಸರ್ಕಾರವು ಭಾಗಶಃ ಹಣ ಒದಗಿಸಬಹುದು ಮತ್ತು ರಾಜ್ಯ ಸರ್ಕಾರವು ಭಾಗಶಃ ಹಣ ಒದಗಿಸಬಹುದು; ಅಥವಾ

(iii) ಕೇಂದ್ರ ಸರ್ಕಾರವು ಭಾಗಶಃ ಹಣ ಒದಗಿಸಬಹುದು, ರಾಜ್ಯ ಸರ್ಕಾರವು ಭಾಗಶಃ ಹಣ ಒದಗಿಸಬಹುದು ಮತ್ತು ಕೇಂದ್ರ ಸರ್ಕಾರವು ಕಾರ್ಯಯೋಜನೆಯಲ್ಲಿ ನಿಯಮಿಸಬಹುದಾದಂಥ ಕಾರ್ಯಯೋಜನೆಯ ಫಲಾನುಭವಿಗಳಿಂದ ಅಥವಾ ನಿಯೋಜಕರಿಂದ ಸಂಗ್ರಹಿಸಲಾದ ವಂತಿಗೆಗಳ ಮೂಲಕ ಭಾಗಶಃ ಹಣ ಒದಗಿಸಬಹುದು.

(2) ಕೇಂದ್ರ ಸರ್ಕಾರವು ಅಧಿಸೂಚಿಸಿದ ಪ್ರತಿಯೊಂದು ಕಾರ್ಯಯೋಜನೆಯು,–

(i) ಕಾರ್ಯಯೋಜನೆಯ ವ್ಯಾಪ್ತಿಗೆ;

(ii) ಕಾರ್ಯಯೋಜನೆಯ ಫಲಾನುಭವಿಗಳಿಗೆ;

(iii) ಕಾರ್ಯಯೋಜನೆಯ ಸಂಪನ್ಮೂಲಗಳಿಗೆ;

(iv) ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ಏಜೆನ್ಸಿಗೆ ಅಥವಾ ಏಜೆನ್ಸಿಗಳಿಗೆ;

(v) ಕುಂದು ಕೊರತೆಗಳ ನಿವಾರಣೆಗೆ; ಮತ್ತು

(vi) ಸಂಬಂಧಪಟ್ಟ ಯಾವುದೇ ಇತರೆ ವಿಷಯಕ್ಕೆ

– ಸಂಬಂಧಿಸಿದ ವಿಷಯಗಳೂ ಒಳಗೊಂಡಂತೆ ಕಾರ್ಯ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅವಶ್ಯಕವಾದಂಥ ವಿಷಯಗಳಿಗಾಗಿ ಉಪಬಂಧ ಕಲ್ಪಿಸತಕ್ಕದ್ದು.

## ಅಧ್ಯಾಯ – III

## ರಾಷ್ಟ್ರೀಯ ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಮಂಡಳಿ

5. **ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ, ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಈ ಅಧಿನಿಯಮದ ಮೇರೆಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನೆರವೇರಿಸಲು ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ ಎಂದು ಕರೆಯಲಾಗುವ ಒಂದು ರಾಷ್ಟ್ರೀಯ ಮಂಡಳಿಯನ್ನು ರಚಿಸತಕ್ಕದ್ದು.

(2) ರಾಷ್ಟ್ರೀಯ ಮಂಡಳಿಯು, ಈ ಮುಂದಿನ ಸದಸ್ಯರನ್ನು, ಒಳಗೊಂಡಿರತಕ್ಕದ್ದು; ಎಂದರೆ:–

(ಎ) ಒಕ್ಕೂಟದ ಕಾರ್ಮಿಕ ಮತ್ತು ಉದ್ಯೋಗ ಸಚಿವರು – ಪದನಿಮಿತ್ತ ಅಧ್ಯಕ್ಷರು;

(ಬಿ) ಮಹಾ ನಿರ್ದೇಶಕರು (ಕಾರ್ಮಿಕ ಕಲ್ಯಾಣ) – ಪದನಿಮಿತ್ತ ಸದಸ್ಯ – ಕಾರ್ಯದರ್ಶಿ; ಮತ್ತು

(ಸಿ) ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡುವ ಮೂವತ್ತನಾಲ್ಕು ಸದಸ್ಯರು, ಅವರ ಪೈಕಿ,–

(i) ಅಸಂಘಟಿತ ವಲಯದ ಕೆಲಸಗಾರರನ್ನು ಪ್ರತಿನಿಧಿಸುವ ಏಳು ಸದಸ್ಯರು;

(ii) ಅಸಂಘಟಿತ ವಲಯದ ನಿಯೋಜಕರನ್ನು ಪ್ರತಿನಿಧಿಸುವ ಏಳು ಸದಸ್ಯರು;

(iii) ನಾಗರಿಕ ಸಮಾಜದ ಸುಪ್ರಸಿದ್ಧ ವ್ಯಕ್ತಿಗಳನ್ನು ಪ್ರತಿನಿಧಿಸುವ ಏಳು ಸದಸ್ಯರು;

(iv) ಲೋಕ ಸಭೆಯನ್ನು ಪ್ರತಿನಿಧಿಸುವ ಇಬ್ಬರು ಸದಸ್ಯರು ಮತ್ತು ರಾಜ್ಯ ಸಭೆಯನ್ನು ಪ್ರತಿನಿಧಿಸುವ ಒಬ್ಬ ಸದಸ್ಯ;

(v) ಕೇಂದ್ರ ಸರ್ಕಾರದ ಮಂತ್ರಾಲಯವನ್ನು ಮತ್ತು ಸಂಬಂಧಪಟ್ಟ ಇಲಾಖೆಗಳನ್ನು ಪ್ರತಿನಿಧಿಸುವ ಐವರು ಸದಸ್ಯರು; ಮತ್ತು

(vi) ರಾಜ್ಯ ಸರ್ಕಾರಗಳನ್ನು ಪ್ರತಿನಿಧಿಸುವ ಐವರು ಸದಸ್ಯರು

– ಇರತಕ್ಕದ್ದು.

(3) ಮಂಡಲಿಯ ಅಧ್ಯಕ್ಷರು ಮತ್ತು ಇತರ ಸದಸ್ಯರು, ಕಾರ್ಮಿಕ ಕಲ್ಯಾಣ, ವ್ಯವಸ್ಥಾಪನೆ, ಹಣಕಾಸು, ಕಾನೂನು ಮತ್ತು ಆಡಳಿತ ಕ್ಷೇತ್ರಗಳಲ್ಲಿನ ಸುಪ್ರಸಿದ್ಧ ವ್ಯಕ್ತಿಗಳಾಗಿರತಕ್ಕದ್ದು.

(4) (2)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ಪ್ರವರ್ಗಗಳಿಂದ ರಾಷ್ಟ್ರೀಯ ಮಂಡಲಿಯ ಸದಸ್ಯರಾಗಿ ನಾಮ ನಿರ್ದೇಶನ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆಯು, ಸದಸ್ಯರ ಪದಾವಧಿಯು ಮತ್ತು ಇತರ ಸೇವಾ ಷರತ್ತುಗಳು, ರಾಷ್ಟ್ರೀಯ ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು ಮತ್ತು ಅದರ ಸದಸ್ಯರ ಪೈಕಿ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳವರಿಗೆ, ಅನುಸೂಚಿತ ಬುಡಕಟ್ಟುಗಳವರಿಗೆ, ಅಲ್ಪ ಸಂಖ್ಯಾತರಿಗೆ ಮತ್ತು ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡತಕ್ಕದ್ದು.

(5) ರಾಷ್ಟ್ರೀಯ ಮಂಡಲಿಯ ಅವಧಿಯು, ಮೂರು ವರ್ಷಗಳಾಗಿರತಕ್ಕದ್ದು.

(6) ರಾಷ್ಟ್ರೀಯ ಮಂಡಳಿಯು, ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ, ಕನಿಷ್ಠ ಪಕ್ಷ ವರ್ಷಕ್ಕೆ ಮೂರು ಬಾರಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪ ನಡೆಸುವುದಕ್ಕೆ ಸಂಬಂಧಪಟ್ಟಂತೆ ಅಂಥ ಕಾರ್ಯ ವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

(7) ಸದಸ್ಯರು ರಾಷ್ಟ್ರೀಯ ಮಂಡಳಿಯ ಸಭೆಗಳಲ್ಲಿ ಹಾಜರಾದುದಕ್ಕಾಗಿ ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯಬಹುದು.

(8) ರಾಷ್ಟ್ರೀಯ ಮಂಡಳಿಯು, ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಅಸಂಘಟಿತ ಕೆಲಸಗಾರರ ವಿವಿಧ ವರ್ಗಗಳಿಗಾಗಿ ಸೂಕ್ತ ಕಾರ್ಯಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

(ಬಿ) ಈ ಅಧಿನಿಯಮದ ಜಾರಿಯಿಂದ ಉದ್ಭವಿಸುವಂಥ, ತನಗೆ ಉಲ್ಲೇಖಿಸಬಹುದಾದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ಸಿ) ಅಸಂಘಟಿತ ಕೆಲಸಗಾರರಿಗಾಗಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಸಮಾಜ ಕಲ್ಯಾಣ ಕಾರ್ಯಯೋಜನೆಗಳ ಮೇಲ್ವಿಚಾರಣೆ ಮಾಡುವುದು;

(ಡಿ) ಅಸಂಘಟಿತ ಕೆಲಸಗಾರರ ನೋಂದಣಿಯಲ್ಲಿ ಮತ್ತು ಅವರಿಗೆ ಗುರುತು ಚೀಟಿ ನೀಡಿಕೆಯಲ್ಲಿ ಆದ ಪ್ರಗತಿಯ ಪರಿಶೀಲನೆ ಮಾಡುವುದು;

(ಇ) ರಾಜ್ಯ ಮಟ್ಟದಲ್ಲಿ ನಿರ್ವಹಿಸಿದ ದಾಖಲೆ ಇಡುವ ಪ್ರಕಾರ್ಯಗಳ ಪರಿಶೀಲನೆ ಮಾಡುವುದು;

(ಎಫ್) ವಿವಿಧ ಕಾರ್ಯಯೋಜನೆಗಳ ಮೇರೆಗೆ ನಿಧಿಗಳಿಂದ ಮಾಡಿದ ವೆಚ್ಚದ ಪರಿಶೀಲನೆ ಮಾಡುವುದು; ಮತ್ತು

(ಜಿ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ತನಗೆ ವಹಿಸಿಕೊಟ್ಟಿರುವ ಇತರ ಪ್ರಕಾರ್ಯಗಳನ್ನು ಕೈಗೊಳ್ಳುವುದು.

## ಅಧ್ಯಾಯ – IV

### ರಾಜ್ಯ ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಮಂಡಳಿ

6. ರಾಜ್ಯ ಸಾಮಾಜಿಕ ಭದ್ರತಾ ಮಂಡಳಿ.– (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಮೇರೆಗೆ, ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ತನಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನೆರವೇರಿಸಲು -------- (ರಾಜ್ಯದ ಹೆಸರು) ರಾಜ್ಯ ಸಾಮಾಜಿಕ ಭದ್ರತಾ ಮಂಡಳಿ ಎಂದು ಕರೆಯಲಾಗುವ ಒಂದು ರಾಜ್ಯ ಮಂಡಳಿಯನ್ನು ರಚಿಸತಕ್ಕದ್ದು.

(2) ರಾಜ್ಯ ಮಂಡಳಿಯು, ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಸಂಬಂಧಪಟ್ಟ ರಾಜ್ಯದ ಕಾರ್ಮಿಕ ಮತ್ತು ಉದ್ಯೋಗ ಸಚಿವರು – ಪದನಿಮಿತ್ತ ಅಧ್ಯಕ್ಷರು;

(ಬಿ) ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ (ಕಾರ್ಮಿಕ) – ಪದನಿಮಿತ್ತ ಸದಸ್ಯ-ಕಾರ್ಯದರ್ಶಿ; ಮತ್ತು

(ಸಿ) ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡುವ ಇಪ್ಪತ್ತೆಂಟು ಸದಸ್ಯರು, ಅವರ ಪೈಕಿ,–

(i) ಅಸಂಘಟಿತ ಕೆಲಸಗಾರರನ್ನು ಪ್ರತಿನಿಧಿಸುವ ಏಳು ಸದಸ್ಯರು;

(ii) ಅಸಂಘಟಿತ ಕೆಲಸಗಾರರ ನಿಯೋಜಕರನ್ನು ಪ್ರತಿನಿಧಿಸುವ ಏಳು ಸದಸ್ಯರು;

(iii) ಸಂಬಂಧಪಟ್ಟ ರಾಜ್ಯದ ವಿಧಾನ ಸಭೆಯ ಸದಸ್ಯರನ್ನು ಪ್ರತಿನಿಧಿಸುವ ಇಬ್ಬರು ಸದಸ್ಯರು;

(iv) ನಾಗರಿಕ ಸಮಾಜದ ಸುಪ್ರಸಿದ್ಧ ವ್ಯಕ್ತಿಗಳನ್ನು ಪ್ರತಿನಿಧಿಸುವ ಐವರು ಸದಸ್ಯರು;

(v) ಸಂಬಂಧಪಟ್ಟ ರಾಜ್ಯ ಸರ್ಕಾರಿ ಇಲಾಖೆಗಳನ್ನು ಪ್ರತಿನಿಧಿಸುವ ಏಳು ಸದಸ್ಯರು

– ಇರತಕ್ಕದ್ದು.

(3) ಮಂಡಳಿಯ ಅಧ್ಯಕ್ಷರು ಮತ್ತು ಇತರ ಸದಸ್ಯರು, ಕಾರ್ಮಿಕ ಕಲ್ಯಾಣ, ವ್ಯವಸ್ಥಾಪನೆ, ಹಣಕಾಸು, ಕಾನೂನು ಮತ್ತು ಆಡಳಿತದ ಕ್ಷೇತ್ರಗಳಲ್ಲಿನ ಸುಪ್ರಸಿದ್ಧ ವ್ಯಕ್ತಿಗಳಾಗಿರತಕ್ಕದ್ದು.

(4) (2)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ಪ್ರವರ್ಗಗಳಿಂದ ರಾಜ್ಯ ಮಂಡಲಿಯ ಸದಸ್ಯರಾಗಿ ನಾಮನಿರ್ದೇಶನ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆಯು, ಸದಸ್ಯರ ಪದಾವಧಿಯು ಮತ್ತು ಇತರೆ ಸೇವಾ ಷರತ್ತುಗಳು, ರಾಜ್ಯ ಮಂಡಲಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನವು ಮತ್ತು ಅದರ ಸದಸ್ಯರ ಪೈಕಿ ಖಾಲಿ ಸ್ಥಾನಗಳನ್ನು ಭರ್ತಿಮಾಡುವ ರೀತಿಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳವರಿಗೆ, ಅನುಸೂಚಿತ ಬುಡಕಟ್ಟುಗಳವರಿಗೆ, ಅಲ್ಪ ಸಂಖ್ಯಾತರಿಗೆ ಮತ್ತು ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡತಕ್ಕದ್ದು.

(5) ರಾಜ್ಯ ಮಂಡಲಿಯ ಅವಧಿಯು ಮೂರು ವರ್ಷಗಳಾಗಿರತಕ್ಕದ್ದು.

(6) ರಾಜ್ಯ ಮಂಡಲಿಯು, ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪ ನಡೆಸುವುದಕ್ಕೆ ಸಂಬಂಧಪಟ್ಟಂತೆ ಅಂಥ ಕಾರ್ಯ ವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

(7) ಸದಸ್ಯರು ರಾಜ್ಯ ಮಂಡಳಿಯ ಸಭೆಗಳಲ್ಲಿ ಹಾಜರಾದುದಕ್ಕಾಗಿ ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯಬಹುದು.

(8) ರಾಜ್ಯ ಮಂಡಳಿಯು, ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(ಎ) ಅಸಂಘಟಿತ ವಲಯದ ಕೆಲಸಗಾರರ ವಿವಿಧ ವರ್ಗಗಳಿಗಾಗಿ ಸೂಕ್ತ ಕಾರ್ಯ ಯೋಜನೆಗಳನ್ನು ರೂಪಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು;

(ಬಿ) ಈ ಅಧಿನಿಯಮದ ಜಾರಿಯಿಂದ ಉದ್ಭವಿಸುವಂಥ, ತನಗೆ ಉಲ್ಲೇಖಿಸಬಹುದಾದಂಥ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಸಿ) ಅಸಂಘಟಿತ ಕೆಲಸಗಾರರಿಗಾಗಿ ರಾಜ್ಯ ಸರ್ಕಾರವು, ಜಾರಿಗೆ ತಂದಿರುವ ಸಮಾಜ ಕಲ್ಯಾಣ ಕಾರ್ಯ ಯೋಜನೆಗಳ ಮೇಲ್ವಿಚಾರಣೆ ಮಾಡುವುದು;

(ಡಿ) ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಿದ ದಾಖಲೆ ಇಡುವ ಪ್ರಕಾರ್ಯಗಳ ಪರಿಶೀಲನೆ ಮಾಡುವುದು;

(ಇ) ಅಸಂಘಟಿತ ವಲಯದ ಕೆಲಸಗಾರರ ನೋಂದಣಿಯಲ್ಲಿ ಮತ್ತು ಅವರಿಗೆ ಗುರುತು ಚೀಟಿ ನೀಡಿಕೆಯಲ್ಲಿ ಆದ ಪ್ರಗತಿಯ ಪರಿಶೀಲನೆ ಮಾಡುವುದು;

(ಎಫ್) ವಿವಿಧ ಕಾರ್ಯಯೋಜನೆಗಳ ಮೇರೆಗೆ ನಿಧಿಗಳಿಂದ ಮಾಡಿದ ವೆಚ್ಚದ ಪರಿಶೀಲನೆ ಮಾಡುವುದು; ಮತ್ತು

(ಜಿ) ರಾಜ್ಯ ಸರ್ಕಾರವು ಕಾಲಕಾಲಕ್ಕೆ ತನಗೆ ವಹಿಸಿಕೊಟ್ಟಿರುವ ಇತರ ಪ್ರಕಾರ್ಯಗಳನ್ನು ಕೈಗೊಳ್ಳುವುದು.

**7. ರಾಜ್ಯ ಸರ್ಕಾರದ ಕಾರ್ಯಯೋಜನೆಗಳಿಗೆ ಹಣ ಒದಗಿಸುವುದು.**– (1) ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಕಾರ್ಯಯೋಜನೆಗೆ,–

(i) ರಾಜ್ಯ ಸರ್ಕಾರವು ಪೂರ್ಣವಾಗಿ ಹಣ ಒದಗಿಸಬಹುದು; ಅಥವಾ

(ii) ರಾಜ್ಯ ಸರ್ಕಾರವು ಭಾಗಶಃ ಹಣ ಒದಗಿಸಬಹುದು, ರಾಜ್ಯ ಸರ್ಕಾರವು ಕಾರ್ಯ ಯೋಜನೆಯಲ್ಲಿ ನಿಯಮಿಸಬಹುದಾದಂತೆ ಕಾರ್ಯಯೋಜನೆಯ ಫಲಾನುಭವಿಗಳಿಂದ ಅಥವಾ ನಿಯೋಜಕರಿಂದ ಸಂಗ್ರಹಿಸಿದ ವಂತಿಗೆಗಳ ಮೂಲಕ ಭಾಗಶಃ ಹಣ ಒದಗಿಸಬಹುದು.

(2) ರಾಜ್ಯ ಸರ್ಕಾರವು, ತಾನು ರೂಪಿಸಿದ ಕಾರ್ಯಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವನ್ನು ಕೋರಬಹುದು.

(3) ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಕಾರ್ಯ ಯೋಜನೆಗಳ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಗಳಿಗೆ ಅಂಥ ಹಣಕಾಸಿನ ನೆರವನ್ನು ಒದಗಿಸಬಹುದು.

**8. ಜಿಲ್ಲಾ ಆಡಳಿತವು ದಾಖಲೆಯನ್ನು ಇಡುವುದು.**– ಈ ಅಧಿನಿಯಮದ ಉದ್ದೇಶಕ್ಕಾಗಿ ದಾಖಲೆ ಇಡುವ ಪ್ರಕಾರ್ಯವನ್ನು ಜಿಲ್ಲಾ ಆಡಳಿತವು ನಿರ್ವಹಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ದಾಖಲೆ ಇಡುವ ಪ್ರಕಾರ್ಯವನ್ನು,–

(ಎ) ಗ್ರಾಮೀಣ ಪ್ರದೇಶಗಳಲ್ಲಿ ಜಿಲ್ಲಾ ಪಂಚಾಯಿತಿಯು; ಮತ್ತು

(ಬಿ) ನಗರ ಪ್ರದೇಶಗಳಲ್ಲಿ ನಗರ ಸ್ಥಳೀಯ ನಿಕಾಯಗಳು

– ನೆರವೇರಿಸತಕ್ಕದ್ದೆಂದು ನಿರ್ದೇಶಿಸಬಹುದು.

9. **ಕೆಲಸಗಾರರ ಸಹಾಯ ಕೇಂದ್ರಗಳು.–** ರಾಜ್ಯ ಸರ್ಕಾರವು, ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸಲು ಕಾಲಕಾಲಕ್ಕೆ ಅವಶ್ಯಕವೆಂದು ಪರಿಗಣಿಸಬಹುದಾದಂಥ, ಕೆಲಸಗಾರರ ಸಹಾಯ ಕೇಂದ್ರಗಳನ್ನು ಸ್ಥಾಪಿಸಬಹುದು, ಎಂದರೆ:–

(ಎ) ಅಸಂಘಟಿತ ಕೆಲಸಗಾರರಿಗಾಗಿ ಲಭ್ಯವಿರುವ ಸಾಮಾಜಿಕ ಭದ್ರತಾ ಕಾರ್ಯ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪ್ರಸಾರ ಮಾಡುವುದು;

(ಬಿ) ಅಸಂಘಟಿತ ಕೆಲಸಗಾರರ ನೋಂದಣಿ ಅರ್ಜಿ ನಮೂನೆಗಳನ್ನು ಭರ್ತಿ ಮಾಡಲು, ಪರಿಶೀಲಿಸಲು ಮತ್ತು ಕಳುಹಿಸಿ ಕೊಡಲು ಅನುಕೂಲ ಮಾಡಿಕೊಡುವುದು;

(ಸಿ) ಜಿಲ್ಲಾ ಆಡಳಿತದಿಂದ ನೋಂದಣಿ ಪಡೆದುಕೊಳ್ಳಲು ಅಸಂಘಟಿತ ಕೆಲಸಗಾರನಿಗೆ ಸಹಾಯ ಮಾಡುವುದು; ಮತ್ತು

(ಡಿ) ನೋಂದಾಯಿತ ಅಸಂಘಟಿತ ಕೆಲಸಗಾರರನ್ನು ಸಾಮಾಜಿಕ ಭದ್ರತಾ ಕಾರ್ಯ ಯೋಜನೆಗಳಲ್ಲಿ ಸೇರಿಸುವುದಕ್ಕಾಗಿ ಅನುಕೂಲ ಮಾಡಿಕೊಡುವುದು.

## ಅಧ್ಯಾಯ – V

## ನೋಂದಣಿ

10. **ನೋಂದಣಿಗೆ ಮತ್ತು ಸಾಮಾಜಿಕ ಭದ್ರತಾ ಪ್ರಯೋಜನಗಳಿಗೆ ಅರ್ಹತೆ.–** (1) ಪ್ರತಿಯೊಬ್ಬ ಅಸಂಘಟಿತ ಕೆಲಸಗಾರನು, ಈ ಕೆಳಕಂಡ ಷರತ್ತುಗಳನ್ನು ಪೂರೈಸುವುದಕ್ಕೆ ಒಳಪಟ್ಟು ನೋಂದಣಿಗೆ ಅರ್ಹನಾಗಿರತಕ್ಕದ್ದು, ಎಂದರೆ:–

(ಎ) ಅವನಿಗೆ ಅಥವಾ ಅವಳಿಗೆ 14 ವರ್ಷ ವಯಸ್ಸು ತುಂಬಿರತಕ್ಕದ್ದು; ಮತ್ತು

(ಬಿ) ಅವನು ಅಥವಾ ಅವಳು ತಾನು ಅಸಂಘಟಿತ ಕೆಲಸಗಾರನೆಂದು/ಳೆಂದು ಸ್ಥಿರೀಕರಿಸಿ ಒಂದು ಸ್ವಯಂ ಘೋಷಣೆಯನ್ನು ನೀಡತಕ್ಕದ್ದು.

(2) ಪ್ರತಿಯೊಬ್ಬ ಅರ್ಹ ಅಸಂಘಟಿತ ಕೆಲಸಗಾರನು, ನೋಂದಣಿಗಾಗಿ ಜಿಲ್ಲಾ ಆಡಳಿತಕ್ಕೆ ನಿಯಮಿಸಿದ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಜಿಲ್ಲಾ ಆಡಳಿತವು, ಪ್ರತಿಯೊಬ್ಬ ಅಸಂಘಟಿತ ಕೆಲಸಗಾರನನ್ನು ನೋಂದಣಿ ಮಾಡತಕ್ಕದ್ದು ಮತ್ತು ಅವರಿಗೆ ಒಂದು ಗುರುತಿನ ಚೀಟಿಯನ್ನು ನೀಡತಕ್ಕದ್ದು. ಅದು ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರುವ ಒಂದು ಸ್ಮಾರ್ಟ್ ಕಾರ್ಡ್ ಆಗಿರತಕ್ಕದ್ದು ಮತ್ತು ಅದು ಜೊತೆಯಲ್ಲಿ ಒಯ್ಯುವಂಥದ್ದಾಗಿರತಕ್ಕದ್ದು.

(4) ಒಬ್ಬ ನೋಂದಾಯಿತ ಅಸಂಘಟಿತ ಕೆಲಸಗಾರನು ಒಂದು ಕಾರ್ಯಯೋಜನೆಗೆ ವಂತಿಗೆ ಸಲ್ಲಿಸುವುದು ಅಗತ್ಯವಾದರೆ, ಅವನು ಅಥವಾ ಅವಳು, ಅಂಥ ವಂತಿಗೆಯನ್ನು ಸಂದಾಯ ಮಾಡಿದ ತರುವಾಯ ಮಾತ್ರವೇ ಆ ಕಾರ್ಯ ಯೋಜನೆಯ ಮೇರೆಗೆ ಸಾಮಾಜಿಕ ಭದ್ರತಾ ಪ್ರಯೋಜನಗಳಿಗೆ ಅರ್ಹರಾಗತಕ್ಕದ್ದು.

(5) ಒಂದು ಕಾರ್ಯ ಯೋಜನೆಗೆ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ವಂತಿಗೆ ಸಲ್ಲಿಸುವುದು ಅಗತ್ಯವಾದರೆ, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಆ ಕಾರ್ಯ ಯೋಜನೆಯ ಪ್ರಕಾರ ನಿಯತವಾಗಿ ವಂತಿಗೆಯನ್ನು ನೀಡತಕ್ಕದ್ದು.

## ಅಧ್ಯಾಯ – VI

### ಸಂಕೀರ್ಣ

11. **ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದ ವಿಷಯಗಳ ಸಂಬಂಧದಲ್ಲಿ,–

(i) ರಾಷ್ಟ್ರೀಯ ಮಂಡಳಿಗೆ; ಅಥವಾ

(ii) ರಾಜ್ಯ ಸರ್ಕಾರಕ್ಕೆ ಅಥವಾ ಆ ರಾಜ್ಯದ ರಾಜ್ಯ ಮಂಡಳಿಗೆ

– ನಿರ್ದೇಶನಗಳನ್ನು ನೀಡಬಹುದು.

12. **ಖಾಲಿ ಸ್ಥಾನಗಳು, ಇತ್ಯಾದಿಗಳು ವ್ಯವಹರಣೆಯನ್ನು ಅಸಿಂಧುಗೊಳಿಸತಕ್ಕದ್ದಲ್ಲ.–** ರಾಷ್ಟ್ರೀಯ ಮಂಡಳಿಯ ಅಥವಾ ಯಾವುದೇ ರಾಜ್ಯ ಮಂಡಳಿಯ ಯಾವುವೇ ವ್ಯವಹರಣೆಗಳು, ರಾಷ್ಟ್ರೀಯ ಮಂಡಳಿಯಲ್ಲಿ ಅಥವಾ ಸಂದರ್ಭಾನುಸಾರ, ರಾಜ್ಯ ಮಂಡಳಿಯಲ್ಲಿ ಯಾವುವೇ ಖಾಲಿ ಸ್ಥಾನವಿರುವ ಅಥವಾ ಅದರ ರಚನೆಯಲ್ಲಿ ನ್ಯೂನತೆ ಇರುವ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

13. **ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು ಎಂದರೆ:–

(ಎ) 4ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕಾರ್ಯಯೋಜನೆಯ ಫಲಾನುಭವಿಗಳಿಂದ ಅಥವಾ ನಿಯೋಜಕರಿಂದ ಸಂಗ್ರಹಿಸಬೇಕಾದ ವಂತಿಗೆಗಳು;

(ಬಿ) 5ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ರಾಷ್ಟ್ರೀಯ ಮಂಡಳಿಗೆ ನಾಮ ನಿರ್ದೇಶನ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆ, ಸದಸ್ಯರ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು, ಅದು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅದರಲ್ಲಿನ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಸಿ) 5ನೇ ಪ್ರಕರಣದ (6)ನೇ ಉಪ ಪ್ರಕರಣದ ಮೇರೆಗೆ ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ಕಾರ್ಯಕಲಾಪ ನಡೆಸುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನ ನಿಯಮಗಳು;

(ಡಿ) 5ನೇ ಪ್ರಕರಣದ (7)ನೇ ಉಪ ಪ್ರಕರಣದ ಮೇರೆಗೆ ರಾಷ್ಟ್ರೀಯ ಮಂಡಳಿಯ ಸಭೆಗಳಿಗೆ ಹಾಜರಾದುದಕ್ಕಾಗಿ ಭತ್ಯೆಗಳು;

(ಇ) 10ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ; ಮತ್ತು

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**14. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸ ಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು ಎಂದರೆ:–

(ಎ) 6ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಮಂಡಳಿಗೆ, ನಾಮ ನಿರ್ದೇಶನ ಮಾಡಬೇಕಾದ ವ್ಯಕ್ತಿಗಳ ಸಂಖ್ಯೆ, ಸದಸ್ಯರ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು, ಅದು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅದರಲ್ಲಿನ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(ಬಿ) 6ನೇ ಪ್ರಕರಣದ (6)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಮಂಡಳಿಯ ಸಭೆಗಳಲ್ಲಿ ಕಾರ್ಯಕಲಾಪ ನಡೆಸುವುದಕ್ಕೆ ಸಂಬಂಧಿಸಿದ ಕಾರ್ಯ ವಿಧಾನ ನಿಯಮಗಳು.

(ಸಿ) 6ನೇ ಪ್ರಕರಣದ (7)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಮಂಡಳಿಯ ಸಭೆಗಳಿಗೆ ಹಾಜರಾದುದಕ್ಕಾಗಿ ಭತ್ಯೆಗಳು;

(ಡಿ) 7ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕಾರ್ಯಯೋಜನೆಯ ಫಲಾನುಭವಿಗಳಿಂದ ಅಥವಾ ನಿಯೋಜಕರಿಂದ ಸಂಗ್ರಹಿಸಬೇಕಾದ ವಂತಿಗೆಗಳು;

(ಇ) 10ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ; ಮತ್ತು

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ

**15. ನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.–** (1) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುವೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ

ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುವೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ಅಧಿಸೂಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು.

**16. ಕೆಲವು ಕಾನೂನುಗಳನ್ನು ಉಳಿಸುವುದು.–** ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಯಾವುದೂ, ಅಸಂಘಟಿತ ಕೆಲಸಗಾರರಿಗೆ ಈ ಅಧಿನಿಯಮದ ಮೂಲಕ ಅಥವಾ ಈ ಅಧಿನಿಯಮದ ಮೇರೆಗೆ ಕಲ್ಪಿಸಿದ ಕಲ್ಯಾಣ ಕಾರ್ಯಯೋಜನೆಗಳಿಗಿಂತ, ಹೆಚ್ಚು ಪ್ರಯೋಜನವಾಗುವಂಥ ಕಲ್ಯಾಣ ಕಾರ್ಯ ಯೋಜನೆಗಳನ್ನು ಕಲ್ಪಿಸಿರುವ ಒಂದು ರಾಜ್ಯದಲ್ಲಿನ ಯಾವುವೇ ಸಂವಾದಿ ಕಾನೂನಿನ ಕಾರ್ಯಾಚರಣೆಗೆ ಬಾಧಕವಾಗತಕ್ಕದ್ದಲ್ಲ.

**17. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯವೆಂದು ಕಂಡು ಬರಬಹುದಾದಂತೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

## ಅನುಸೂಚಿ – I

**[2 (i)ಮತ್ತು (3)ನೇ ಪ್ರಕರಣಗಳನ್ನು ನೋಡಿ]**

**ಅಸಂಘಟಿತ ಕೆಲಸಗಾರರಿಗಾಗಿ ಸಾಮಾಜಿಕ ಭದ್ರತಾ ಕಾರ್ಯಯೋಜನೆಗಳು**

| ಕ್ರಮ ಸಂಖ್ಯೆ | ಕಾರ್ಯ ಯೋಜನೆಯ ಹೆಸರು |
|---|---|
| 1. | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಕಾರ್ಯಯೋಜನೆ |
| 2. | ರಾಷ್ಟ್ರೀಯ ಕುಟುಂಬ ಪ್ರಯೋಜನ ಕಾರ್ಯ ಯೋಜನೆ |
| 3. | ಜನನಿ ಸುರಕ್ಷಾ ಯೋಜನೆ |
| 4. | ಕೈಮಗ್ಗ ನೇಕಾರರ ಸಮಗ್ರ ಕಲ್ಯಾಣ ಕಾರ್ಯಯೋಜನೆ |
| 5. | ಕರ ಕುಶಲಕರ್ಮಿಗಳ ಸಮಗ್ರ ಕಲ್ಯಾಣ ಕಾರ್ಯಯೋಜನೆ |
| 6. | ಪ್ರಬುದ್ಧ ಕುಶಲಕರ್ಮಿಗಳಿಗೆ ಮಾಸಾಶನ |
| 7. | ಮೀನುಗಾರರ ಕಲ್ಯಾಣ ಮತ್ತು ತರಬೇತಿ ಹಾಗು ವಿಸ್ತರಣೆಗಾಗಿ ರಾಷ್ಟ್ರೀಯ ಕಾರ್ಯಯೋಜನೆ |
| 8. | ಜನಶ್ರೀ ಬಿಮಾ ಯೋಜನೆ |
| 9. | ಆಮ್ ಆದ್ಮಿ ಬಿಮಾ ಯೋಜನೆ |
| 10. | ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ. |

## ಅನುಸೂಚಿ – II

[2 (ಎಂ) ಪ್ರಕರಣವನ್ನು ನೋಡಿ]

| ಕ್ರಮ ಸಂಖ್ಯೆ | ಅಧಿನಿಯಮದ ಹೆಸರು |
|---|---|
| 1. | ಕಾರ್ಮಿಕ ನಷ್ಟ ಪರಿಹಾರ ಅಧಿನಿಯಮ, 1923 (1923ರ 8) |
| 2. | ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) |
| 3. | ನಿಯೋಜಿತರ ರಾಜ್ಯ ವಿಮಾ ಅಧಿನಿಯಮ, 1948 (1948ರ 34) |
| 4. | ನೌಕರರ ಭವಿಷ್ಯ ನಿಧಿಗಳ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (1952ರ 19) |
| 5. | ಪ್ರಸೂತಿ ಸೌಕರ್ಯ ಅಧಿನಿಯಮ, 1961 (1961ರ 53) |
| 6. | ಉಪದಾನ ಸಂದಾಯ ಅಧಿನಿಯಮ, 1972 (1972ರ 39). |

* * * * *